ಶ್ರೀ ವೀರಕುಮಾರ್ ಪಾಟೀಲ್ : ಈ ಕೆಲಸ ಮಂಜೂರಾಗಿ ಎರಡು ವರ್ಷಗಳಾಗಿರುವುದು ನಿಜ. ಕೆಲವೊಂದು ತಾಂತ್ರಿಕ ಸಮಸ್ಯೆಗಳಿಂದ ಕೆಲಸ ನಿಂತಿದೆ. ನಾವು ತಾಂತ್ರಿಕ ಸಮಸ್ಯೆಗಳನ್ನು ನಿವಾರಿಸಿಕೊಂಡು ಕೆಲಸವನ್ನು ಏಕ ಕಾಲದಲ್ಲಿ ಮಾಡುತ್ತೇವೆ ಮತ್ತು ಕೆಲಸವನ್ನು ಬೇಗನೆ ಮುಗಿಸುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಇಲ್ಲಿ ಇದಕ್ಕಾಗಿ ಜಾಗವನ್ನು ಪಡೆದುಕೊಳ್ಳಲು ಈಗಾಗಲೇ ಒಂದು ವರ್ಷವಾಗಿದೆ. ಇನ್ನು ಕೆಲಸ ಮಾಡಲು ಇನ್ನೂ ಒಂದು ವರ್ಷ ಬೇಕಾಗುತ್ತದೆಯೇ?

ಶ್ರೀ ವೀರಕುಮಾರ್ ಪಾಟೀಲ್ : ಈ ಬಗ್ಗೆ ಕ್ಲಿಯರೆನ್ಸ್ ಬಂದಕೂಡಲೇ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ರಾಜ್ಯದಲ್ಲಿರುವ ಕೆರೆಗಳಲ್ಲಿ ಹೂಳೆತ್ತುವುದರಲ್ಲಿ ವಿಳಂಬ

460 - ಶ್ರೀ ರವೀಂದ್ರನಾಥ್ ಎಸ್.ಎ (ಮಾಯಕೊಂಡ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ವಿಶ್ವಬ್ಯಾಂಕಿನ ನೆರವಿನ ವಿಳಂಬದಿಂದಾಗಿ ರಾಜ್ಯದ ಕೆರೆಗಳ ಹೂಳೆತ್ತುವ ಸರ್ಕಾರದ ಉದ್ದೇಶಿತ ಕಾರ್ಯಕ್ರಮ ಮುಂದೂಡಲ್ಪಡುವ ಸಾಧ್ಯತೆ ಇದೆಯೇ? ಇದ್ದಲ್ಲಿ ವಿವರ ನೀಡುವುದು?*

ಆ) *ವಿಶ್ವಬ್ಯಾಂಕಿನ ಬಿಡುಗಡೆಗೆ ವಿಳಂಬವಾಗಿರುವ ಹಣ ಎಷ್ಟು? ವಿಳಂಬವಾಗಲು ನೀಡಿರುವ ಕಾರಣ ಏನು?*

ಇ) *ಸರ್ಕಾರ ವಿಶ್ವಬ್ಯಾಂಕಿನಿಂದ ಹಣವನ್ನು ಪಡೆದು ಈ ಹೂಳೆತ್ತುವ ಕಾರ್ಯಕ್ರಮವನ್ನು ಹಮ್ಮಿಕೊಂಡು ಪೂರ್ಣಗೊಳಿಸುವುದು ಯಾವಾಗ?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

ಅ) ಆ) ಮತ್ತು ಇ) ಸರ್ಕಾರದ ಉದ್ದೇಶಿತ ಕೆರೆಗಳ ಅಭಿವೃದ್ಧಿ ಯೋಜನೆಗಾಗಿ ರಾಜ್ಯ ಸರ್ಕಾರವು 946.47 ಕೋಟಿ ರೂ.ಗಳ ಪ್ರಸ್ತಾವನೆಯನ್ನು ಭಾರತ ಸರ್ಕಾರಕ್ಕೆ ಸಲ್ಲಿಸಲಾಗಿದ್ದು ವಿಶ್ವಬ್ಯಾಂಕಿಗೆ ಶಿಫಾರಸ್ಸು ಮಾಡಲು ಕೋರಿದೆ. ಪ್ರಸ್ತಾವನೆಯು ವಿಶ್ವಬ್ಯಾಂಕಿನಲ್ಲಿ ತೀರ್ಪಿಗಾಗಿ ಉಪಸ್ಥಿತಿಯಲ್ಲಿರುವ ಕಾರಣ ವಿಶ್ವಬ್ಯಾಂಕಿನ ಹಣ ಬಿಡುಗಡೆಗೆ ಯಾವುದೇ ವಿಳಂಬವಾಗುವುದಿಲ್ಲ. ಭಾರತ ಸರ್ಕಾರದ ಹಣಕಾಸು ವ್ಯವಹಾರ ಇಲಾಖೆಯು ರಾಜ್ಯದ ಪ್ರಸ್ತಾವನೆಯನ್ನು ಪರಿಶೀಲಿಸಿ ದಿನಾಂಕ 5-10-2000 ರಂದು ವಿಶ್ವಬ್ಯಾಂಕಿಗೆ ಅನುಮೋದನೆ ನೀಡಲು ಶಿಫಾರಸ್ಸು ಮಾಡಿರುತ್ತದೆ. ವಿಶ್ವಬ್ಯಾಂಕಿನಿಂದ ಹಣದ ನೆರವು ಪಡೆಯುವ ಯೋಜನೆಯು 2001 ರ ಜೂನ್ ಅಥವಾ ಜುಲೈ ತಿಂಗಳಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇರುವುದರಿಂದ ಈ ಕಾರ್ಯಕ್ರಮವನ್ನು ಜುಲೈ 2001 ರಿಂದ ಪ್ರಾರಂಭಿಸಲಾಗುವುದು.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ನಾನು ಮೂರು ಪ್ರಶ್ನೆಗಳನ್ನು ಕೇಳಿದ್ದೆ, ಆದರೆ ಇವರು ಚರಿತ್ರೆ ಬರೆದಂತೆ ಉತ್ತರವನ್ನು ಕೊಟ್ಟಿದ್ದಾರೆ. ಯಾವ ಪ್ರಶ್ನೆಗೆ ಉತ್ತರ ಯಾವುದು ಎಂದು ನನಗೆ ಗೊತ್ತಾಗುತ್ತಿಲ್ಲ. ದಯಮಾಡಿ ಯಾವ ಪ್ರಶ್ನೆಗೆ ಯಾವ ಉತ್ತರ ಎಂಬುದನ್ನು ಹೇಳಬೇಕು.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ಪ್ರೋಸೆಸ್ ಆ ರೀತಿ ಇರುವುದರಿಂದ ನಾವು ಸಂಪೂರ್ಣವಾಗಿ ಉತ್ತರವನ್ನು ಕೊಟ್ಟಿದ್ದೇವೆ. ಉತ್ತರದ ಕೊನೆಯಲ್ಲಿ ಸ್ಪಷ್ಟವಾಗಿ ಜುಲೈ 2001ರಿಂದ ಕಾರ್ಯಕ್ರಮವನ್ನು ಪ್ರಾರಂಭಿಸಲಾಗುವುದೆಂದು ತಿಳಿಸಿದ್ದೇವೆ. ಆದರೆ ನಾವು ಇದುವರೆಗೆ ಆಗಿರುವ ಬೆಳವಣಿಗೆಗಳ ಬಗ್ಗೆ ಹೇಳಿದ್ದೇವೆ. ಕೇಂದ್ರ ಸರ್ಕಾರದಿಂದ ಆಗಿರತಕ್ಕ ಕೆಲಸಗಳು, ರಾಜ್ಯ ಸರ್ಕಾರದಿಂದ ಆಗತಕ್ಕ ಕೆಲಸಗಳು ಮತ್ತು ಯಾವ ಮಟ್ಟದಲ್ಲಿ ಸಂಪೂರ್ಣವಾಗಿ ಕ್ರಮ ತೆಗೆದುಕೊಳ್ಳಲಾಗುವುದು ಎಂಬ ಬಗ್ಗೆ ವಿವರಿಸಿದ್ದೇವೆ. ತಾವು ಕೇಳಿರುವ ಒಂದೊಂದು ಪ್ರಶ್ನೆಗೆ ಒದಗಿಸಿರುವ ಹಣದ ಬಗ್ಗೆ ಹೇಳುವುದಕ್ಕಿಂತ ಎಲ್ಲಾ ಪ್ರಶ್ನೆಗಳಿಗೂ ಸೇರಿಸಿ ಹೇಳಿದ್ದೇವೆ. ತಮ್ಮ ಉದ್ದೇಶವೇನಿದೆ ಅದು ಈಡೇರಿದೆಯೆಂದು ಕಾಣುತ್ತದೆ.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕಿನಿಂದ ಬಿಡುಗಡೆಗೆ ವಿಳಂಬವಾಗಿರುವ ಹಣ ಎಷ್ಟು? ವಿಳಂಬವಾಗಲು ನೀಡಿರುವ ಕಾರಣವೇನು ಎಂದು ಪ್ರಶ್ನೆ ಕೇಳಿದ್ದರೆ, ಹಣದ ಬಿಡುಗಡೆಗೆ ಯಾವುದೇ ವಿಳಂಬವಾಗಿರುವುದಿಲ್ಲವೆಂದು ಉತ್ತರವನ್ನು ಕೊಟ್ಟಿದ್ದಾರೆ. ಅನಂತರ ವಿಶ್ವಬ್ಯಾಂಕ್‌ನಿಂದ ಹಣದ ನೆರವು ಪಡೆಯುವ ಯೋಜನೆಯು 2001ರ ಜೂನ್ ಅಥವಾ ಜುಲೈ ತಿಂಗಳಿನಲ್ಲಿ ಪೂರ್ಣಗೊಳ್ಳುವ ಸಾಧ್ಯತೆ ಇರುವುದು ಎಂದು ತಿಳಿಸಿದ್ದಾರೆ. ಇದರಲ್ಲಿ ಯಾವುದು ಸರಿ, ಯಾವುದು ತಪ್ಪು ಎಂಬುದು ನನಗೆ ಗೊತ್ತಾಗುತ್ತಿಲ್ಲ. ಅನಂತರ ಜುಲೈ 2001ರಿಂದ ಹೂಳೆತ್ತುವ ಕೆಲಸವನ್ನು ಪ್ರಾರಂಭಿಸಲಾಗುವುದು ಎಂದು ಹೇಳುತ್ತಾರೆ. ಮಾನ್ಯ ಸಚಿವರು ರಾಜ್ಯದ ಪ್ರವಾಸವನ್ನು ಮಾಡಿದ್ದ ಸಂದರ್ಭದಲ್ಲಿ ಈ ವರ್ಷ ಐದಾರು ಸಾವಿರ ಕೆರೆಗಳ ಹೂಳನ್ನು ಎತ್ತುವ ಕೆಲಸ ಮಾಡುವುದಾಗಿ ಹೇಳಿದ್ದರು. ಆದರೆ ಕೆರೆಗಳ ಹೂಳೆತ್ತುವ ಕೆಲಸ ಸ್ಥಗಿತವಾಗಿದೆ ಎಂದು ಪತ್ರಿಕೆಗಳಲ್ಲಿ ಅವರದ್ದೇ ಹೇಳಿಕೆ ಬಂದಿದೆ.

ಅಧ್ಯಕ್ಷರು : ಪತ್ರಿಕೆಗಳಲ್ಲಿ ಬಂದಿರುವ ವಿಚಾರ ಬೇರೆ. ಆದರೆ ಮಾನ್ಯ ಸಚಿವರು ಈಗ ಏನು ಹೇಳಿದ್ದಾರೋ ಅದು ಸರಿಯಾಗಿದೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, ವಿಶ್ವಬ್ಯಾಂಕ್‌ನ ಅಧಿಕಾರಿಗಳು ಹೋದ ವಾರ ಇದಕ್ಕೆ ಸಂಬಂಧಪಟ್ಟಂತೆ ಅಂತಿಮವಾದ ಸಭೆಯನ್ನು ನಡೆಸಿ ವಿಚಾರವಿನಿಯಮ ಮಾಡಿಕೊಂಡು ಹೋಗಿದ್ದಾರೆ ಹಾಗೆಯೇ ಜಲಸಂವರ್ಧನ ಯೋಜನಾ ಸಂಘವೆಂದು ಒಂದು ಸಹಕಾರಿ ಸಂಘ ಇದೆ. ಏಕೆಂದರೆ ಯಾವುದೇ ಹಣವಿರಬಹುದು, ಅದನ್ನು ನೇರವಾಗಿ ಇಲಾಖೆಗಳಿಗೆ ತೆಗೆದುಕೊಳ್ಳಲು ಬರುವುದಿಲ್ಲ. ಆದ್ದರಿಂದ ಜಲಸಂವರ್ಧನಾ ಯೋಜನಾ ಸಂಘವೆಂದು ಅಕ್ಟೋಬರ್ 5ನೇ ತಾರೀಖು ಸಚಿವ ಸಂಪುಟದಿಂದ ಒಪ್ಪಿಗೆಯನ್ನು ಪಡೆದು ಈ ತಿಂಗಳ 23ರಂದು ನೊಂದಾವಣೆ ಸಹ ಆಗಿದೆ. ಈ ಮಧ್ಯೆ ಹುಡ್ಕೋದಿಂದ 200 ಕೋಟಿ ರೂಪಾಯಿಗಳನ್ನು ತೆಗೆದುಕೊಂಡು ಈ ಕೆಲಸಕ್ಕೆ ಸಂಪೂರ್ಣವಾದ ಚಾಲನೆ ಕೊಡುವುದಾಗಿ ಮತ್ತೆ ಮತ್ತೆ ಹೇಳುತ್ತಿದ್ದೇನೆ. ಹೋಬಳಿಗೆ ಒಂದು ಕೆರೆಯಂತೆ ಸರಣಿ ಕೆರೆಗಳಿಗೆ ಆದ್ಯತೆಯ ಮೇರೆಗೆ ಹೂಳೆತ್ತುವ ಕೆಲಸವನ್ನು ಕೈಗೊಳ್ಳಲು ಮಾಹಿತಿ ಕಳಿಸಿಕೊಡಿ ಎಂದು ಪ್ರತಿಯೊಬ್ಬ ಶಾಸಕರಿಗೆ ನಾವು ಪತ್ರವನ್ನು ಬರೆಯುತ್ತಿದ್ದೇವೆ. ಶಾಸಕರು ಕಳಿಸಿದ ಮಾಹಿತಿಯ ಅನುಸಾರ ನಾವು

ತಕ್ಷಣ ಕಾರ್ಯಕ್ರಮದ ರೂಪುರೇಷೆಯನ್ನು ಮಾಡುತ್ತೇವೆ. ವಿಶ್ವಬ್ಯಾಂಕ್‌ನ ಗೈಡ್‌ಲೈನ್ಸನ್ನು ಜೊತೆಯಲ್ಲಿ ಇಟ್ಟುಕೊಂಡೇ ಈ ಕಾರ್ಯಕ್ರಮವನ್ನು ಹಮ್ಮಿಕೊಂಡು ಬರುತ್ತಿದ್ದೇವೆ. ಈಗಾಗಲೇ ರಾಜ್ಯದ ಡಾರ್ಕ್ ಮತ್ತು ಗ್ರೇ ಏರಿಯಾವನ್ನು ನೋಡಿ ಸುಮಾರು 72 ಬ್ಲಾಕ್‌ಗಳನ್ನು ಪತ್ತೆ ಮಾಡಿ ಇದಕ್ಕೆ ಆದ್ಯತೆಯನ್ನು ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರ ಪ್ರಶ್ನೆಗೆ ಸಂಪೂರ್ಣವಾದ ಉತ್ತರ ದೊರಕಿದೆಯೆಂದು ನನ್ನ ಭಾವನೆ.

ಶ್ರೀ ಎಸ್.ಎ. ರವೀಂದ್ರನಾಥ್ : ಮಾನ್ಯ ಅಧ್ಯಕ್ಷರೆ, ಸಾಕಷ್ಟು ಕೆರೆಗಳ ಹೂಳನ್ನೆಲ್ಲಾ ತೆಗೆದೇ ಬಿಟ್ಟಿದ್ದಾರೆ ಎಂಬ ರೀತಿಯಲ್ಲಿ ಅವರು ಹೇಳುತ್ತಿದ್ದಾರೆ. ಆದರೆ 1999-2000 ಮತ್ತು 2000-2001ಕ್ಕೆ ಎಲ್ಲೂ ಸಹ ಒಂದು ಕೆರೆಯ ಹೂಳನ್ನು ಎತ್ತಿಲ್ಲ. ಸಾವಿರಾರು ಕೆರೆಗಳೀನು ಮಳೆಯಿಂದ ಒಡೆದಿದೆ ಇದಕ್ಕೆ ಇವರೇ ಕಾರಣವೆಂದು ನನ್ನ ಅಭಿಪ್ರಾಯ ಏಕೆಂದರೆ, ಅಲ್ಲಿ ಹೂಳೆತ್ತುವ ಕೆಲಸವನ್ನು, ಬೇರೆ ಬೇರೆ ರಿಪೇರಿ ಮಾಡುವ ಕೆಲಸವನ್ನು ಮಾಡಿದ್ದರೆ ಕೆರೆಗಳು ಒಡೆಯುತ್ತಿರಲಿಲ್ಲ. ಮುಂದಿನ ಜುಲೈನಲ್ಲಿ ಮತ್ತೆ ಮಳೆಗಾಲ ಪ್ರಾರಂಭವಾಗುತ್ತದೆ. ಅಷ್ಟರಲ್ಲಿ ಕೆರೆಯ ಹೂಳೆತ್ತುವ ಕೆಲಸ ಮಾಡುತ್ತೀರ? ಆದ್ದರಿಂದ ಮುಂದಿನ ಜನವರಿ, ಫೆಬ್ರವರಿ ತಿಂಗಳಿನೊಳಗೆ ಈ ಕೆಲಸವನ್ನು ಮಾಡುತ್ತೀರ ಎಂಬ ಬಗ್ಗೆ ಕೇಳಬಯಸುತ್ತೇನೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ : ಮಾನ್ಯ ಅಧ್ಯಕ್ಷರೆ, 1999-2000ನೇ ಸಾಲಿನಲ್ಲಿ 253 ಕೆರೆಗಳ ಹೂಳನ್ನು ತೆಗೆಯುವ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೇವೆ. ಆದರೆ ಮಳೆ ಜಾಸ್ತಿಯಾಗಿರುವುದರಿಂದ ಯಾವುದೇ ಕಾರಣಕ್ಕೆ ಹೂಳನ್ನು ತೆಗೆಯುವ ಕೆಲಸವನ್ನು ತೆಗೆದುಕೊಳ್ಳಬಾರದು, ಜನವರಿ ತಿಂಗಳು ಆದಮೇಲೆ ಆಯಾಯ ಶಾಸಕರ ಗಮನಕ್ಕೆ ತಂದು ಇದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

ಬೆಳ್ತಂಗಡಿ ತಾಲ್ಲೂಕಿನಲ್ಲಿ ಕಿಂಡಿ ಅಣೆಕಟ್ಟುಗಳ ಮಂಜೂರಾತಿ

461 - ಶ್ರೀ ಕೆ. ಪ್ರಭಾಕರ ಬಂಗೇರ (ಬೆಳ್ತಂಗಡಿ) : ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. *ಬೆಳ್ತಂಗಡಿ ತಾಲ್ಲೂಕಿನ 2000-2001ನೇ ಸಾಲಿಗೆ ಸಣ್ಣ ನೀರಾವರಿ ಇಲಾಖೆಯಿಂದ ಮಂಜೂರಾದ ಕಿಂಡಿ ಅಣೆಕಟ್ಟುಗಳ ಸಂಖ್ಯೆ ಎಷ್ಟು?*

2. *ಅವುಗಳ ಕಾಮಗಾರಿಯನ್ನು ಯಾವಾಗ ಪ್ರಾರಂಭಿಸಲಾಗುವುದು?*

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು) :

1. 2000-2001ನೇ ಸಾಲಿನಲ್ಲಿ ಬೆಳ್ತಂಗಡಿ ತಾಲ್ಲೂಕಿನ ಯಾವುದೇ ಕಿಂಡಿ ಅಣೆಕಟ್ಟು ಕಾಮಗಾರಿಗಳು ಮಂಜೂರಾಗಿರುವುದಿಲ್ಲ.

2. ಆದರೂ, ಆಯವ್ಯಯದಲ್ಲಿ ಸೇರಿರುವ ಎರಡು ಕಾಮಗಾರಿಗಳಿಗೆ ಶೇಕಡ 30 ರಷ್ಟು ಅನುದಾನ ಇರುತ್ತದೆ (ವಿವರಗಳು ಈ ಕೆಳಕಂಡಂತಿವೆ)